# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

ಎಸ್‌ಸಿ. 258/2023

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ ಶ್ರೀ ಕುಮಾರ | | ಪ್ರಮಾಣ ಮಾಡಿಸಿದ ದಿನಾಂಕಃ |
| ತಂದೆ/ಗಂಡನ ಹೆಸರು | ಃ ಶ್ರೀ ಮುದ್ದೇಗೌಡ | | **21.08.2024** |
| ವಯಸ್ಸು | ಃ **51** ವರ್ಷ | | |
| ವೃತ್ತಿ | ಃ ವ್ಯವಸಾಯ | **ಪ್ರಾ.ಸಾ.** ಃ | **05** |
| ವಾಸಸ್ಥಳ | ಃ ಸಿದ್ದಲಿಂಗಪುರ | **ಚಾ.ಸಾ.** ಃ | **03** |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ಚಾ.ಸಾ–2 ಶಾರದಮ್ಮ ನನ್ನ ಅತ್ತೆಯಿರುತ್ತಾರೆ. ಚಾ.ಸಾ–2 ಇವರಿಗೆ ಸೇರಿದ ಮನೆ ಮತ್ತು ಮಳಿಗೆಗಳು ಸಿದ್ದಲಿಂಗಪುರದಲ್ಲಿ ಇದೆ. ಆ ಪೈಕಿ ಒಂದು ಮಳಿಗೆಯನ್ನು ಬೇಕರಿ ನಡೆಸಲು ಬಾಡಿಗೆಗೆ ಕೊಟ್ಟಿದ್ದರು. ಆದರೆ ಯಾರು ಆ ಬೇಕರಿ ನಡೆಸುತ್ತಿದ್ದರು ಎಂದು ಗೊತ್ತಿಲ್ಲ. ಕೋರ್ಟ್ ಮುಂದೆ ಇರುವ ಆರೋಪಿತನನ್ನು ನಾನು ಈ ಮೊದಲು ಎಲ್ಲಿಯೂ ನೋಡಿಲ್ಲ. ಈಗ ಅಂದಾಜು 1 ವರ್ಷದ ಹಿಂದೆ ಒಂದು ದಿನ ಶಾರದಮ್ಮ ಇವರ ಮಳಿಗೆ ಹತ್ತಿರ ಜನ ಸೇರಿದ್ದನ್ನು ನೋಡಿ ನಾನು ಅಲ್ಲಿಗೆ ಹೋಗುವಷ್ಟರಲ್ಲಿ ಯಾರಿಗೋ ಹುಷಾರಿಲ್ಲ ಎಂದು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು. ಆದರೆ ಆ ಕಾಲಕ್ಕೆ ನಾನು ಶಾರದಮ್ಮ ಇವರ ಮನೆ ಬಳಿ ಹೋಗಿರಲಿಲ್ಲ. ಮೋಹನ್ ಕುಮಾರ್ ಮತ್ತು ಮಮತಾ ಇವರು ಗಲಾಟೆ ಮಾಡಿದ ಬಗ್ಗೆ ನನಗೆ ಗೊತ್ತಿಲ್ಲ. ಆ ದಿನ ಜನ ಸೇರಿದಾಗ ಅಲ್ಲಿ ಯಾರಿಗೆ ಏನಾಗಿದೆ ಎಂದು ನಾನು ವಿಚಾರಿಸಿರಲಿಲ್ಲ. ಆ

ಕಾಲಕ್ಕೆ ನಾನು ಯಾರನ್ನು ಸಹ ಆಸ್ಪತ್ರೆಗೆ ಕರೆದುಕೊಂಡು ಹೋಗಿಲ್ಲ. ನಾನು ಪೋಲೀಸಿನವರ ಮುಂದೆ ಹೇಳಿಕೆ ಕೊಟ್ಟಿಲ್ಲ. ಈಗ ನಾನು ನೋಡುತ್ತಿರುವ ಮಹಜರ್ ಮೇಲಿನ ಸಹಿ ನನ್ನದೇ ಇದೆ ಆದರೆ ಆ ಸಹಿಯನ್ನು ಎಲ್ಲಿ ಮಾಡಿದ್ದೆ ಎಂದು ಈಗ ನೆನಪಾಗುತ್ತಿಲ್ಲ. ಸದರಿ ಮಹಜರ್ ಅನ್ನು ನಿ.ಪಿ–*9* ಮತ್ತು ಸಹಿಯನ್ನು ನಿ.ಪಿ–*9*(ಎ) ಎಂದು ಗುರುತಿಸಿದೆ. ನಿ.ಪಿ–*9* ಕ್ಕೆ ಸಹಿ ಮಾಡಿದಾಗ ನನಗೆ ಯಾವುದೇ ವಸ್ತುವನ್ನು ತೋರಿಸಿಲ್ಲ ಮತ್ತು ಯಾವ ಕಾರಣಕ್ಕೆ ನನ್ನ ಸಹಿ ಪಡೆದಿದ್ದಾರೆ ಎಂದು ಹೇಳಿಲ್ಲ. ನಿ.ಪಿ–*9* ಕ್ಕೆ ಸಹಿ ಮಾಡಿದಾಗ ನಾನು ಪೋಲೀಸರಿಗೆ ಯಾವುದೇ ಸ್ಥಳ ತೋರಿಸಿಲ್ಲ.

***ಈ ಹಂತದಲ್ಲಿ, ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.***

***ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-***

*2.* ದಿಃ*25.05.2023* ರಂದು ನನಗೆ ದಿಃ*24.05.2023* ರ ಘಟನೆಗೆ ಸಂಬಂದಪಟ್ಟಂತೆ ವಿಚಾರಣೆಗೆ ಹಾಜರಾಗಲು ನೋಟಿಸ್ ಕೊಟ್ಟಿದ್ದರು ಎಂದರೆ ಸರಿಯಲ್ಲ. ಆ ಕಾಲಕ್ಕೆ ಈಗ ನಾನು ನೋಡುತ್ತಿರುವ ನೋಟಿಸ್ ಗೆ ಸಹಿ ಹಾಕಿದ್ದೆ ಎಂದರೆ ಸರಿಯಲ್ಲ. ಆ ನೋಟಿಸ್ ಮೇಲಿನ ಸಹಿ ಮಾತ್ರ ನನ್ನದೇ ಇದೆ. ಸದರಿ ನೋಟಿಸ್ ಅನ್ನು ನಿ.ಪಿ–*10* ಮತ್ತು ಸಹಿಯನ್ನು ನಿ.ಪಿ–*10*(ಎ) ಎಂದು ಗುರುತಿಸಿದೆ. *2022* ರ ಫೆಬ್ರವರಿ *10* ನೇ ತಾರೀಖಿನಿಂದ ಕೋರ್ಟ್ ಮುಂದೆ ಇರುವ ಆರೋಪಿತ ಚಾ.ಸಾ–*2* ಶಾರದಮ್ಮ ಇವರ ಮಳಿಗೆಯನ್ನು ಬಾಡಿಗೆಗೆ ಪಡೆದುಕೊಂಡು ರಾಘವೇಂದ್ರ ಬೇಕರಿ ಮತ್ತು ಸ್ವೀಟ್ಸ್ ಹೆಸರಿನ ಅಂಗಡಿ ನಡೆಸುತ್ತಿದ್ದ ಎಂದರೆ ನನಗೆ ಗೊತ್ತಿಲ್ಲ. ಆ ಕಾಲಕ್ಕೆ ಆರೋಪಿತ ಮಮತಾ ಇವರನ್ನು ಮದುವೆಯಾಗಿರುವುದಾಗಿ, ನಮಗೆ ಮಕ್ಕಳಿಲ್ಲ ಮತ್ತು ಮಮತಾ ಕೆರೆ ತೊಣ್ಣುರಿನ ಶಿಶುವಿಹಾರದಲ್ಲಿ ಟೀಚರ್ ಆಗಿ ಕೆಲಸ ಮಾಡುತ್ತಾಳೆ

ಎಂದು ಹೇಳಿದ್ದ ಎಂದರೆ ನಂತರ ಆರೋಪಿತ ಮೋಹನ್ ಕುಮಾರ್ ಮತ್ತು ಮಮತಾ ಇಬ್ಬರು ಗಂಡ ಹೆಂಡತಿ ರೀತಿ ಪೂಜೆ ಮಾಡಿ ಬೇಕರಿ ವ್ಯವಹಾರ ಪ್ರಾರಂಭಿಸಿದ್ದ ಕಾರಣ ಅವರಿಬ್ಬರು ಗಂಡ ಹೆಂಡತಿ ಎಂದು ನಂಬಿದ್ದೇವು ಎಂದರೆ ಸರಿಯಲ್ಲ. ನಾನು ಆಗಾಗ ಬೇಕರಿಗೆ ಹೊಗುತ್ತಿದ್ದರಿಂದ ನನಗೆ ಆರೋಪಿತ ಮತ್ತು ಮಮತಾ ಇವರ ಪರಿಚಯ ಇತ್ತು ಮತ್ತು ಮಮತಾ ಬಿಡುವಿನ ವೇಳೆಯಲ್ಲಿ ಬೇಕರಿ ವ್ಯವಹಾರ ಮಾಡುತ್ತಿದ್ದಳು ಎಂದರೆ ಸರಿಯಲ್ಲ.

3. ದಿಃ24.05.2023 ರಂದು ಮದ್ಯಾಹ್ನ ***3.45*** ಕ್ಕೆ ಶಾರದಮ್ಮ ಇವರ ಮನೆ ಬಳಿ ಜಗಳ ಮಾಡುತ್ತಿರುವ ಬಗ್ಗೆ ಗೊತ್ತಾಗಿ ನಾನು ಹೋಗಿ ಶಾರದಮ್ಮ ಇವರನ್ನು ವಿಚಾರಿಸಿದಾಗ ಬೇಕರಿಯಲ್ಲಿ ಮೋಹನ ಮತ್ತು ಅವರ ಹೆಂಡತಿ ಮಮತಾ ಮದ್ಯಾಹ್ನ ***1.30*** ರಿಂದ ಜಗಳ ಮಾಡುತ್ತಿದ್ದಾರೆ ಹೋಗಿ ನೋಡಿ ಎಂದು ಹೇಳಿದ್ದರು ಎಂದರೆ ಸರಿಯಲ್ಲ. ಆ ಕಾಲಕ್ಕೆ ನಾನು ಬೇಕರಿ ಬಳಿ ಹೋಗಲು ಶಾರದಮ್ಮ ಇವರ ಮನೆ ಮೆಟ್ಟಿಲು ಇಳಿಯುತ್ತಿರುವಾಗ ಅಮ್ಮ ಎಂದು ಕಿರುಚಿಕೊಂಡ ಶಬ್ದ ಕೇಳಿತ್ತು ಮತ್ತು ಆರೋಪಿತ ಬೇಕರಿಯೊಳಗಿನಿಂದ ಆಚೆ ಬಂದು ರಸ್ತೆ ಕಡೆಗೆ ಓಡಿ ಹೋಗಿದ್ದ ಎಂದರೆ ಸರಿಯಲ್ಲ. ನಂತರ ನಾನು ಬೇಕರಿ ಒಳಗೆ ಹೋಗಿ ನೋಡಿದಾಗ ಮಮತಾ ಪ್ರಜ್ಞೆ ತಪ್ಪಿ ರಕ್ತದ ಮಡುವಿನಲ್ಲಿ ಬಿದಿದ್ದಳು ಎಂದರೆ ಸರಿಯಲ್ಲ. ತಕ್ಷಣ ನಾನು ಸದ್ದಾಮ್ ನ ಆಂಬ್ಯಲೆನ್ಸ್ ಗೆ ಕರೆ ಮಾಡಿ ಅಕ್ಕಪಕ್ಕದವರನ್ನು ಕರೆದು ಸಂಜೆ ***5*** ಗಂಟೆಗೆ ಆಂಬ್ಯುಲೆನ್ಸ್ ಬಂದಿದ್ದರಿಂದ ಅದರಲ್ಲಿ ಮಮತಾಳನ್ನು ಹಾಕಿಕೊಂಡು ಬೇಕರಿ ರೋಲಿಂಗ್ ಶಟರ್ ಎಳೆದು ಬೀಗ ಹಾಕಿ ಆಸ್ಪತ್ರೆ ಬಳಿ ಹೋದಾಗ ವೈದ್ಯರು ಮಮತಾ ಮರಣಹೊಂದಿದ್ದಾಗಿ ತಿಳಿಸಿದ್ದರು ಎಂದರೆ ಸರಿಯಲ್ಲ. ಆ ಕಾಲಕ್ಕೆ ನಾನೇ ಮಮತಾಳ ಗಂಡನ ಹೆಸರು ಮೋಹನ್ ಎಂದು

ಹೇಳಿ ಅವರ ಮನೆ ವಿಳಾಸ ಗೊತ್ತಿಲ್ಲದೆ ಇದುದ್ದರಿಂದ ನನ್ನ ಮನೆ ವಿಳಾಸ ತಿಳಿಸಿದ್ದೆ ಎಂದರೆ ಸರಿಯಲ್ಲ.

***4.*** ಆ ದಿನ ಸಂಜೆ ***5.30*** ಗಂಟೆಗೆ ರಾಮೇಗೌಡ ಎನ್ನುವವರು ಬಂದಾಗ ಮಮತಾ ತನ್ನ ಹೆಂಡತಿ ಎಂದು ಹೇಳಿದಾಗ ನಾನು ಅವರು ಮೋಹನನ ಹೆಂಡತಿ ಅಲ್ಲವಾ ಎಂದು ಕೇಳಿದ್ದೆ ಎಂದರೆ ಸರಿಯಲ್ಲ. ಆ ಕಾಲಕ್ಕೆ ರಾಮೇಗೌಡ ಇವರು ಮಮತಾ ಬೇಕರಿ ನಡೆಸಲು ಆರೋಪಿತನಿಗೆ ಹಣ ಕೊಟ್ಟಿದ್ದಾಳೆ ಎಂದು ಮತ್ತು ಆರೋಪಿತನೊಂದಿಗೆ ಸಲುಗೆಯಿಂದ ಇದ್ದು ಆ ಬಗ್ಗೆ ಅವರು ಬುದ್ದಿ ಹೇಳಿದ್ದಾಗಿ ನಂತರ ಮಮತಾ ಸಾಲದ ಹಣ ವಾಪಸ್ಸು ಕೇಳಿದಾಗ ಆರೋಪಿತ ತಪ್ಪಿಸಿಕೊಳ್ಳುತ್ತಿರುವುದಾಗಿ ಹೇಳಿದ್ದಳು ಮತ್ತು ಆ ದಿನ ಪಾಂಡವಪುರಕ್ಕೆ ಹೊಗುವುದಾಗಿ ಹೇಳಿ ಅಲ್ಲಿಗೆ ಬಂದಿದ್ದಾಗಿ ನಮಗೆ ತಿಳಿಸಿದ್ದರು ಎಂದರೆ ಸರಿಯಲ್ಲ. ನಂತರ ದಿಃ***25.05.2023*** ರಂದು ಸಂಜೆ ***5*** ಗಂಟೆಗೆ ಆರೋಪಿತನನ್ನು ದಸ್ತಗಿರಿ ಮಾಡಿ ಆ ಸ್ಥಳಕ್ಕೆ ಬಂದಿದ್ದಾಗ ನಾನೇ ಆ ಬೇಕರಿ ಬೀಗ ಪೋಲೀಸರಿಗೆ ಕೊಟ್ಟಿದ್ದೆ ಎಂದರೆ ಸರಿಯಲ್ಲ. ಆ ಕಾಲಕ್ಕೆ ಪೋಲೀಸರು ಬೀಗ ತೆಗೆದಾಗ ಆರೋಪಿತ ಹಾಜರುಪಡಿಸಿದ್ದ ಕೊಳವೆ ರಾಡು, ಸ್ಥಳದಲ್ಲಿ ಬಿದಿದ್ದ ಹೆಪ್ಪು ಗಟ್ಟಿದ್ದ ರಕ್ತ ಮತ್ತು ಪುಟ್ ಮ್ಯಾಟ್ ಅನ್ನು ಅಮಾನತ್ತು ಪಡಿಸಿಕೊಂಡು ಪಂಚನಾಮೆ ಮಾಡಿದ್ದರು ಎಂದರೆ ಸರಿಯಲ್ಲ. ಆ ಕಾಲಕ್ಕೆ ಕೊಲೆ ಮಾಡಿದ್ದಾಗಿ ಒಪ್ಪಿಕೊಂಡು, ಕೊಲೆ ಮಾಡಿದ್ದಕ್ಕೆ ಕಾರಣ ಮತ್ತು ಕೊಲೆ ಮಾಡಿದ ರೀತಿಯ ಬಗ್ಗೆ ಹೇಳಿದ್ದ ಎಂದರೆ ಸರಿಯಲ್ಲ. ಅದೇ ಸ್ಥಳದಲ್ಲಿ ನನಗೆ ನಿ.ಪಿ–***10*** ರಂತೆ ನೋಟಿಸ್ ಕೊಟ್ಟು ನಿ.ಪಿ–***9*** ರಂತೆ ಮಹಜರ್ ಮಾಡಿದ್ದರು ಎಂದರೆ ಸರಿಯಲ್ಲ. ಈ ಬಗ್ಗೆ ಫೆಬ್ರವರಿ -------- ಗುರುತಿಸುತ್ತೇನೆ ಎಂದು ಹೇಳಿಕೆ ಕೊಟ್ಟಿದ್ದೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿ.ಪಿ–***11*** ಎಂದು ಗುರುತಿಸಿದೆ. ಈಗ ನಾನು ನೋಡುತ್ತಿರುವ ***4***

ಪೊಟೋಗಳಲ್ಲಿ ನಾನು ಸಹ ಇದ್ದೇನೆ. ಆ ಪೊಟೋಗಳನ್ನು ನಾನು ಮನೆಯಲ್ಲಿದ್ದಾಗ ನನ್ನನ್ನು ಅಲ್ಲಿಗೆ ಕರೆಸಿ ತೆಗೆಸಿದ್ದಾರೆ. ಸದರಿ ಪೊಟೋಗಳನ್ನು ನಿ.ಪಿ–*12* ರಿಂದ *15* ಎಂದು ಗುರುತಿಸಿದೆ. ಈಗ ಆರೋಪಿತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು : ಆರೋಪಿ ಪರ ವಕೀಲರವರಿಂದಃ- ಇಲ್ಲ

ಮರು ವಿಚಾರಣೆಃ- ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
**ಮೈಸೂರು**